ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ಕೆಲವು ವಿಷಯಗಳು ಕಾನೂನಿಗಿಂತಲೂ ಮೇಲಾಗಿ ಇರುತ್ತವೆ. ಶ್ರೀಮಾನ್ ನಾಡಗೌಡರು ಮೇಲ್ಮನೆಯಲ್ಲಿ ಮಂತ್ರಿಗಳಾಗಿ ಉತ್ತರ ಕೊಟ್ಟಿದ್ದಾರೆಯೇ ಏನಾ ಅವರು ಆ ಮನೆಯ ಸದಸ್ಯರಾಗಿ ಅಲ್ಲ. ಇಲ್ಲಿಯೂಕೂಡ ಅವರು ಮಂತ್ರಿಗಳಾಗಿ ಬರುವ ಸಂದರ್ಭದಲ್ಲಿ, ಈ ಸಭೆಯ ವಿಚಾರವಾಗಿ ಮೇಲ್ಮನೆಯಲ್ಲಿ ಕೆಲವು ಮಾತುಗಳನ್ನು ಆಡಿ, ಈ ಸಭೆಯನ್ನು ಅವಹೇಳನ ಮಾಡಿರುವ ಸಂಬಂಧದಲ್ಲಿ ಅದನ್ನು ನಾವು ಯಾವ ರೀತಿಯಿಂದಲೂ ಪುರಸ್ಕರಿಸಬೇಕಾದ್ದು ಸರಿಯಾದುದಲ್ಲ. ಈ ವಿಷಯದಲ್ಲಿ ಅವರು ಈ ಸಭೆಯ ಕ್ಷಮಾಪಣೆಯನ್ನು ಕೇಳಿಕೊಳ್ಳಬೇಕು. ಶ್ರೀಮಾನ್ ನಾಡಗೌಡರಾಗಿ ಅಲ್ಲದೆ ಇದ್ದರೂ ಅವರು ಸಹಕಾರ ಖಾತೆಯ ಮಂತ್ರಿಗಳಾಗಿ ಈ ಸಭೆಯು ಕ್ಷಮಾಪಣೆಯನ್ನು ಕೇಳಿಕೊಳ್ಳಬೇಕೆಂದು ಹೇಳುತ್ತೇನೆ.

Sri N. M. KOTRABASAVIAH SOGI (Hadagali).—I rise to a point of order.

Sri AZIZ SAIT (Narasimharaja).—Sir, the member is not in his seat; how can he raise a point of order?

FIRST REPORT OF THE ESTIMATES COMMITTEE

Presentation

Sri B. L. GOWDA (Challakere)—Sir, I present the First Report of the Committee on Estimates on Dairies.

Mr. DEPUTY SPEAKER.—The Report is presented.

Members Representation

Sri N. M. KOTRABASAVIAH SOGI.—Sir, I rise to a point of order. The point of order is, can there be discussion or comment on the ruling of the Chair?

Sri H. SIDDAVEERAPPA.—I am sorry the hon'ble member has not understood what a point of order is. We have made very clear that we obey to your decision and by way of further clarification on the subject we have been requesting you to see that the feelings on this side are allayed. ನುಮ್ಮನೆ ಗರಾಜೆ ಮಾಡಿದರೆ ಹಳ್ಳಿಯಲ್ಲಿ ಒಂದು ಗಾದೆ ಇದೆ*****ಅದರಂತೆ ಮಾಡಬೇಕಾಗುತ್ತದೆ.

ಶ್ರೀ ಎಸ್. ಶಿವಪ್ಪ. - ನಿನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯ ಒಂದು ವಿಚಾರ ಹೇಳಿದ್ದಾರೆ. ನಾವು ಈಗ ಆಯವ್ಯಯದ ಚರ್ಚೆ ಮಾಡುತ್ತಿರುವಾಗ ಹಣಕಾಸಿನ ನೀತಿಯನ್ನು ಚರ್ಚೆಮಾಡುವ ಸಮಯದಲ್ಲಿ ಈ ಸಭೆಯು ಹೊರಗಡೆ ಹಣಕಾಸಿನ ನೀತಿಯ ಬಗ್ಗೆ ಒಂದು ವಿಷಯ ಹೇಳಿದ್ದಾರೆ. ಅವರು ವ್ಯವಸಾಯದ ಯುವಕರ ಸಮೇಳನದಲ್ಲಿ ಡಿಫಿಸಿಟ್ ಫೈನಾನನ್ಸಿಂಗ್ ವಿಚಾರ ಹೇಳಿದ್ದಾರೆ. ಅದಲ್ಲದೆ ಕರೆನ್ಸಿ ನೋಟನ್ನು ಪ್ರಿಂಟ್‌ಮಾಡಿ ಪ್ರೊಡಕ್ಷನ್ ಜಾಸ್ತಿ ಮಾಡಬೇಕು ಎಂದು ಹೊಸ ನೀತಿಯನ್ನು ಹೇಳಿದ್ದಾರೆ. ಇಲ್ಲಿ ಹಣಕಾಸಿನ ಸಚಿವರು ಉಳಿತಾಯ ಬಜೆಟ್ಟನ್ನು ಮಂಡಿಸಿದ್ದಾರೆ. ಮುಖ್ಯಮಂತ್ರಿಗಳು ಹೊರಗಡೆ ಡಿಫಿಸಿಟ್ ಫೈನಾನ್‌ಸಿಂಗ್ ತರಬೇಕೆಂದು ಹೇಳಿದ್ದಾರೆ. ಹಣಕಾಸಿನ ನೀತಿಯ ಬಗ್ಗೆ ಮಾಡಿರುವ ಭಾಷಣ ಅದು. ಅದನ್ನು ಈ ಸಭೆಯಲ್ಲಿ ಹೇಳಬಹುದಾಗಿತ್ತು ಹಣಕಾಸಿನ ನೀತಿಯ ಬಗ್ಗೆ ಇಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಸಬಹುದಾಗಿತ್ತು. ಹಿಂದೆ

*** Matter expunged as ordered by the Chair